# ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಓ ಎಸ್ ನಂ. 128-2011** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮೂರ್ತಿ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 03-12-2021. |

**ಪಾಟೀ ಸವಾಲುಃ  ಶ್ರೀ ಕೆ.ಟಿ.ಆರ್  ವಕೀಲರಿಂದಃ**

ಗೌರಮ್ಮ,ಮಿಣಕಮ್ಮ ಮತ್ತು ಸಣ್ಣಮ್ಮ ನನ್ನ ಸೋದರ ಅತ್ತೆಯಂದಿರು ಎಂದರೆ ಸರಿ. ಗೌರಮ್ಮ ಹಾಗೂ ಮಿಣಕಮ್ಮ ಮೃತಪಟ್ಟಿರುತ್ತಾರೆ ಅವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲದೇ ಇರುವ ಕಾರಣ ಸದರಿಯವರುಗಳಿಗೆ ಮದುವೆ ಅಗಿತ್ತೋ ಇಲ್ಲವೋ  ನನಗೆ ಗೊತ್ತಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ಪ್ರತಿವಾದಿ -2, ಗುರುಸ್ವಾಮಿ ಹಾಗೂ ಪ್ರತಿವಾದಿ-3 ನಂದೀಶ ಅಣ್ಣ ತಮ್ಮಂದಿರು ಎಂದರೆ ಸರಿ. ನಾವು ಮೂವರು ಬೇರೆ ಬೇರೆ ಮನೆ ಕಟ್ಟಿಕೊಂಡಿದ್ದೇವೆ ಎಂದರೆ ಸರಿ. ನಾವುಗಳು ನಮಗೆ ಪಿತ್ರಾರ್ಜಿತವಾಗಿ ಬಂದಿದ್ದ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದೇವೆ ಎಂದರೆ ಸರಿ. ಮುದ್ದಹಳ್ಳಿ ಯಲ್ಲಿರುವ 16 ಕಂಬದ ತೊಟ್ಟಿ ಮನೆಯನ್ನು ನನ್ನ ತಂದೆ ಶಿವಪ್ಪ ಮತ್ತು ನನ್ನ ತಂದೆಯ ಸಹೋದರರು ಮರಪ್ಪ ಮತ್ತು ನಿಂಗಪ್ಪ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಖಾಲಿ ಜಾಗ ಹಾಗೂ 16 ಕಂಬದ ತೊಟ್ಟಿ ಮನೆಯನ್ನು ಸುಮಾರು 30 ವರ್ಷಗಳ ಹಿಂದೆ ಅವರುಗಳು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ನಾವುಗಳು ನಮ್ಮ ತಂದೆ ಭಾಗಕ್ಕೆ ಬಂದ ಖಾಲಿ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದೇವೆ ಎಂದರೆ ಸರಿ. ಅದೇ ರೀತಿ ಮರಪ್ಪ ಹಾಗೂ ನಿಂಗಪ್ಪ ರವರುಗಳು ಸಹ ಅವರವರ ಭಾಗಕ್ಕೆ ಬಂದ ಖಾಲಿ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ನಮ್ಮ ತಂದೆ ಹಾಗೂ ಆತನ ಸಹೋದರರ ನಡುವೆ ಮೇಲೆ ಹೇಳಿದ ಖಾಲಿ ಜಾಗ ಹಾಗೂ 16 ಕಂಬದ ತೊಟ್ಟಿ ಮನೆ ವಿಭಾಗ ಆವುಗಳನ್ನು ಈ ದಾವೆಯಲ್ಲಿ ದಾವಾ ಸ್ವತ್ತುಗಳಾಗಿ ಸೇರಿಸಿಲ್ಲ ಎಂದರೆ ಸರಿ. ಈಗ ನಾನು ಮೇಲೆ ಹೇಳಿದ ವಿಭಾಗದ ವಿಷಯವನ್ನು ನನ್ನ ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**